# ನಿನೇಕೊ ನಿನ್ನ ಹಂಗೇಕೊ

**(Version – 2)**

1. **Ref.:** Shri Purandara Dasara Sahitya Part – 3, Mahatmya Gnyana, edited by Shri Betageri Krishna Sharma and Shri Bengeri Huchha Rayaru, page No. 61. These lyrics are mentioned as Version – 2.
2. **Ref.:** Purandara Sahitya Darshana, Samputa 3, Samaja Darshana edited by Prof. S.K. Ramachandra Rao, page No. 55. These lyrics are given as Version-1.
3. **Note:** Lyrics given without highlights are as per Ref.1. Lyrics as per Ref. 2 are different but the theme is same. Hence, it is listed separately as Version – 1.
4. **Note:** Ankita in these versions are different. In Version-1 it is 'siri purandara vittala' and in Version-2, it is 'sri purandara vittala'. Hence, they are mentioned in different versions.

ರಾಗ: ಪೂರ್ವಿ ತಾಳ: ಆದಿ

ನಿನೇಕೊ ನಿನ್ನ ಹಂಗೇಕೊ, ನಿನ್ನ
ನಾಮದ ಬಲವೆನಗಿದ್ದರೆ ಸಾಕೊ ॥ ಪ ॥

ನಾರಾಯಣೆನ್ನದೆ ನಾರಗನೆನ್ನಲು
ಘೋರ ಪಾತಕಿಯನು ನಾಮವೆ ಕಾಯ್ತಿತೊ ॥ ೧ ॥

ತಂದೆ ಪ್ರಹಲ್ಲಾದನ ಬಾಧೆಯ ಪಡಿಸೆ, ಗೋ-
ವಿಂದನೆಂಬ ಸಿರಿ ನಾಮವೆ ಕಾಯ್ತಿತೊ ॥ ೨ ॥

ಉತ್ತರೆಯ ಗರ್ಭದಿ ಸುತ್ತಲಸ್ತ್ರವಿರೆ
ಚಿತ್ತಜಪಿತ ನಿನ್ನ ನಾಮವೆ ಕಾಯ್ತಿತೊ ॥ ೩ ॥

ಕರಿ ಮಕರಿಗೆ ಸಿಲ್ಕಿ ಮೊರೆ ಇಡುತಿರುವಾಗ
ಪರಮಪುರುಷ ಹರಿ ನಾಮವೆ ಕಾಯ್ತಿತೊ ॥ ೪ ॥

ನಾರಿಯನೆಳತಂದು ಸೀರೆ ಸೆಳೆಯುತಿರೆ

ದ್ವಾರಕಾಪತಿ ನಿನ್ನ ನಾಮವೆ ಕಾಯ್ದಿತೊ ॥ ೫ ॥

ಹಸುಳೆ ಧ್ರುವ ರಾಯನು ಅಡವಿಗೆ ಪೋಪಾಗ
ವಸುದೇವಸುತ ನಿನ್ನ ನಾಮವೆ ಕಾಯ್ದಿತೊ ॥ ೬ ॥

ನಿನ್ನ ನಾಮಕೆ ಸರಿ ಯಾವುದ ಕಾಣೆನೊ
ಪನ್ನಗ ಶಯನ ಶ್ರೀ ಪುರಂದರ ವಿಠ್ಠಲ ॥ ೭ ॥

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

ಇಲ್ಲಿ ಭಕ್ತನು ಪರಮಾತ್ಮನ ಜತೆಯಲ್ಲಿ ಒಂದು ಬಗೆಯ ಸಲುಗೆಯ ನುಡಿಯನ್ನು ಬಳಸಿ, ನಿನ್ನ ನಾಮದ ಬಲವೊಂದಿದ್ದರೆ ನಿನ್ನ ಋಣವು ನನಗೇಕೆ ಎಂದು ದೇವರನ್ನು ಕೇಳಿದಂತೆ ದಾಸರು ಹಾಡಿದ್ದಾರೆ.

೧. **ಹಂಗು** = ಋಣ

**ವ್ಯಾಧನ ಮುನಿಪನ ಮಾಡಿತು : -** (ವಾಲ್ಮೀಕಿ) ಈತನು ಪ್ರಾಚೇತಸ ಋಷಿಯ ಮಗ. ಆದರೆ ಚಿಕ್ಕತನದಲ್ಲಿಯೆ ಬೇಡರ ಪಡೆಯಲ್ಲಿ ಸೇರಿ ದಾರಿಗರನ್ನು ಬಡಿಯುತ್ತಿದ್ದ. ಸಪ್ತ ಋಷಿಗಳು ಭೆಟ್ಟಿಯಾಗಿ ಇವನಿಗೆ ಜ್ಞಾನೋಪದೇಶವನ್ನು ಮಾಡಲು, ಇವನು ರಾಮ ಮಂತ್ರ ಜಪದಿಂದ ಮೈಮರೆತು ಹೋದ. ಆಗ ಈತನ ಮೈಮೇಲೆ ಹುತ್ತ ಬೆಳೆದಿತ್ತು. ಹುತ್ತಕ್ಕೆ ಸಂಸ್ಕೃತದಲ್ಲಿ ವಾಲ್ಮೀಕ ಎಂಬ ಹೆಸರಿದೆ. ವಾಲ್ಮೀಕದಿಂದ ಬಂದುದರಿಂದ ವಾಲ್ಮೀಕಿಯಾದನು. ರಾಮ ಚರಿತ್ರೆಯನ್ನೊಳಗೊಂಡ ರಾಮಾಯಣ ಕಾವ್ಯವನ್ನು ಬರೆದನು.

೨. ಈ ನುಡಿಯಲ್ಲಿ **ಅಜಮಿಳನ** ಕಥೆಯನ್ನು ಹೇಳಿದೆ.

೩. ಇದರಲ್ಲಿ **ಪ್ರಹಲ್ಲಾದನ** ಕಥೆ ಬಂದಿದೆ.

೪. ಇದರಲ್ಲಿ **ಗಂಜೇಂದ್ರ ಮೋಕ್ಷದ** ಕಥೆ ಇದೆ.

೫. ಇದರಲ್ಲಿ **ದ್ರೌಪದಿಯ** ವಸ್ತ್ರಾಪಹರಣದ ಕಥೆ ಬಂದಿದೆ.

೬. ಇದರಲ್ಲಿ **ಧ್ರುವರಾಜನ** ಕಥೆ ಇದೆ.

**Classification:** Keerthane
**Ankita:** sri purandara vittala

**Location:** NA
**Category:** Mahatmya Gyana, Nindaa Stuti.
**Sub-Category:** mara, Dhyana, rama, draupadi, Krishna, yama, ajamila, Narayana, gaja, mosale, prahallada, Dhruva, Vasudeva, muni, Valmiki, tande, govinda, dwaraka,
**Pravachana:** NA
**Explanation:** NA